ಆದ್ದರಿಂದ ದೈಹಿಕ ಶಿಕ್ಷಕರನ್ನು ಬೇರೆಯಾಗಿ ನೇಮಿಸಿ ದೈಹಿಕ ಶಿಕ್ಷಕರಾಗಿಯೇ ಪರಿಗಣಿಸಬೇಕೇ ಹೊರತು ಬೇರೆ ಯಾವ ಕೆಲಸವನ್ನು ಕೊಡಬಾರದು ಮತ್ತು ಕೊರತೆಯಿರುವ ದೈಹಿಕ ಶಿಕ್ಷಕರನ್ನು ನೇಮಿಸಲು ಮಂಜೂರಾತಿ ಮಾಡಿಸಿಕೊಡಬೇಕು.

ಮಾನ್ಯ ಶಿಕ್ಷಣ ಸಚಿವರು ಉತ್ತರಿಸಬೇಕೆಂದು ಕೋರುತ್ತೇನೆ.

ಶ್ರೀ ಎಂ.ಎಸ್. ಆತ್ಮಾನಂದ್ (ತೋಟಗಾರಿಕೆ ರಾಜ್ಯ ಸಚಿವರು) : ಮಾನ್ಯ, ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರ ಪರವಾಗಿ ನಾನು ಈ ಹೇಳಿಕೆಯನ್ನು ನೀಡಬಯಸುತ್ತೇನೆ. ರಾಜ್ಯದ ಹೆಚ್ಚಿನ ಪ್ರಾಥಮಿಕ ಶಾಲೆಗಳಲ್ಲಿ ಪ್ರತ್ಯೇಕ ದೈಹಿಕ ಶಿಕ್ಷಕರ ಹುದ್ದೆಗಳು ಇರುವುದಿಲ್ಲ, ದೈಹಿಕ ಶಿಕ್ಷಣದ ಪಠ್ಯವಸ್ತುವಿದ್ದು ಇದನ್ನು ಶಿಕ್ಷಕರು ಬೋಧಿಸುವರು. ಇನ್ನು ಮುಂದೆ ಪ್ರಾಥಮಿಕ ಶಾಲೆಗಳಲ್ಲಿ ಪ್ರತಿ 7ನೇ ಶಿಕ್ಷಕರ ಹುದ್ದೆ ದೈಹಿಕ ಶಿಕ್ಷಕರ ಹುದ್ದೆಯಾಗಿರುವುದು ಮತ್ತು ಇದನ್ನು ತುಂಬಲು ಕ್ರಮ ತೆಗೆದುಕೊಳ್ಳಲಾಗಿದೆ.

ಹೈಸ್ಕೂಲ್ ತರಗತಿಗಳಲ್ಲಿ ದೈಹಿಕ ಶಿಕ್ಷಣ ಬೋಧಿಸಲು ತರಬೇತಿ ಪಡೆದ ದೈಹಿಕ ಶಿಕ್ಷಕರಿದ್ದಾರೆ. ಇವರು ತರಗತಿಗಳಲ್ಲಿ ದೈಹಿಕ ಶಿಕ್ಷಣ ಬಿಟ್ಟು ಬೇರೆ ವಿಷಯಗಳನ್ನು ಬೋಧಿಸುವುದಾಗಲಿ ಅಥವಾ ಇತರೆ ಕೆಲಸ ಮಾಡುವಂತಿಲ್ಲ. ಆದರೆ, ಅವರ ಕೆಲಸದ ಭಾರ ಕಮ್ಮಿ ಇದ್ದು ಮತ್ತು ಶಿಕ್ಷಕರು ಗೈರು ಹಾಜರಾಗಿದ್ದ ಸಂದರ್ಭಗಳಲ್ಲಿ ಪರ್ಯಾಯ ವ್ಯವಸ್ಥೆ ಮಾಡುವ ದೃಷ್ಟಿಯಿಂದ ಬೇರೆ ಕೆಲಸ ಕೊಡುವ ಸಾಧ್ಯತೆ ಇದೆ. ಹಾಲಿ ಇರುವ ದೈಹಿಕ ಶಿಕ್ಷಕರ ಹುದ್ದೆಯನ್ನು ಕೂಡಲೇ ತುಂಬಲಾಗುವುದು.

ಹಾಲು ಉತ್ಪಾದನಾ ಕೇಂದ್ರ ಸರಬರಾಜು ಮಾಡುವ ಹಾಲಿನ ಪ್ರಮಾಣದಲ್ಲಿ ಶೇ 75ರಷ್ಟನ್ನು ಅರ್ಧಲೀಟರ್ ಪ್ಯಾಕೆಟ್ಟಿನಲ್ಲಿ ಶೇ 25ರಷ್ಟು ಒಂದು ಲೀಟರ್ ಪ್ಯಾಕೆಟ್‌ನಲ್ಲಿ ಕಡ್ಡಾಯವಾಗಿ ಸರಬರಾಜು ಮಾಡುವುದು.

ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ) : ಮಾನ್ಯ ಅಧ್ಯಕ್ಷರೆ, ಈಗ್ಗೆ ಸುಮಾರು 1 ವರ್ಷದಿಂದ ಬೆಂಗಳೂರು, ತುಮಕೂರು ಹೀಗೆ ರಾಜ್ಯದ ಎಲ್ಲಾ ಹಾಲು ಉತ್ಪಾದನಾ ಕೇಂದ್ರ(ಡೇರಿ) ಗಳವರೂ ಅರ್ಧ ಲೀಟರ್ ಹಾಲಿನ ಪ್ಯಾಕೆಟ್‌ಗಳನ್ನು ಅತ್ಯಂತ ಗಣನೀಯ ಪ್ರಮಾಣದಲ್ಲಿ ಕಡಿಮೆ ಮಾಡಿರುವುದರಿಂದ ಹಾಲಿನ ವಿಜೆಂಟರು ಇದನ್ನು ಒಂದು ನೆಪ ಮಾಡಿಕೊಂಡು 1 ಲೀಟರ್ ಪ್ಯಾಕೆಟ್‌ಗಳನ್ನೇ ಒಡೆದು ಒಂದು ದೊಡ್ಡ ಪಾತ್ರೆಗೆ ಸುರಿದುಕೊಂಡು ಅದರ ಜೊತೆಗೆ ಕ್ರೇಟ್‌ನಲ್ಲಿ ಚೆಲ್ಲಿರುವ ಗಲೀಜು ಹಾಲನ್ನೇ ಸುರಿದು, ಅದಕ್ಕೆ ಹೆಚ್ಚಿನ ಪ್ರಮಾಣದಲ್ಲಿ ನೀರನ್ನೂ ಸೇರಿಸಿ ಮಾರುತ್ತಿರುವುದರಿಂದ ಹಾಲು ಒಡೆದುಹೋಗುವುದಲ್ಲದೆ ಗ್ರಾಹಕರು ಮೋಸವಂಚನೆಗೆ ಬಲಿಯಾಗಿ ಆರೋಗ್ಯವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಮನೆಗಳಿಗೆ ಹಾಲನ್ನು ಸರಬರಾಜು ಮಾಡುವ ನೆಪ ಮಾಡಿಕೊಂಡು ವಿಜೆಂಟರು ಹೋಟೆಲ್‌ಗಳಿಗೆ ಹೆಚ್ಚಿನ ಲಾಭಕ್ಕೆ ಮಾರಿಕೊಳ್ಳುತ್ತಿದ್ದಾರೆ.

ಆದ್ದರಿಂದ ಬಳಕೆದಾರರನ್ನು ಮೋಸ, ವಂಚನೆಯಿಂದ ಪಾರುಮಾಡಲು ಪ್ರತಿಯೊಂದು ಡೇರಿಯವರೂ ತಾವು ಸರಬರಾಜು ಮಾಡುವ ಹಾಲಿನ ಪ್ರಮಾಣದಲ್ಲಿ 75 ಭಾಗವನ್ನು ಅರ್ಧ ಲೀಟರ್ ಪ್ಯಾಕೆಟ್‌ಗಳಲ್ಲೂ, 25 ಭಾಗವನ್ನು 1 ಲೀಟರ್ ಪ್ಯಾಕೆಟ್‌ನಲ್ಲೂ ಕಡ್ಡಾಯವಾಗಿ ಸರಬರಾಜು ಮಾಡುವಂತೆ ಕೂಡಲೇ ಸಂಬಂಧಪಟ್ಟವರಿಗೆ ಕಟ್ಟುನಿಟ್ಟಿನ ಆದೇಶವನ್ನು ನೀಡುತ್ತಿರಾ ಎಂದು ಸರ್ಕಾರವನ್ನು ಒತ್ತಾಯಪೂರ್ವಕವಾಗಿ ಕೇಳಬಯಸುತ್ತೇನೆ.

ಶ್ರೀ ಬಸವರಾಜ ಪಾಟೀಲ್(ಪಶುಸಂಗೋಪನ ಸಚಿವರು) : ಮಾನ್ಯ ಅಧ್ಯಕ್ಷರೆ, ಬಹುತೇಕ ಡೈರಿಗಳ ಸಂಸ್ಕರಣ ಸಾಮರ್ಥ್ಯ ಶೈತ್ಯಗಾರ ಹಾಗೂ ಪ್ಯಾಕೇಜಿಂಗ್ ಸಾಮರ್ಥ್ಯ ಕಡಿಮೆ ಇದ್ದು ಗ್ರಾಹಕರ ಪೂರ್ಣ ಬೇಡಿಕೆಯನ್ನು ಪೂರೈಸಲು ಸಾಧ್ಯವಾಗದೆ

ಇದ್ದು ಸುಮಾರು ಕೇವಲ ಶೇಕಡಾ 40 ರಷ್ಟು ಹಾಲಿನ ಬೇಡಿಕೆಯನ್ನು ಮಾತ್ರ ಪೂರೈಸಲಾಗುತ್ತಿದೆ. ಹಾಲಿ ಸರಬರಾಜಾಗುತ್ತಿರುವ ಹಾಲಿನ ಸುಮಾರು ಶೇಕಡಾ 40 ಭಾಗ ಅರ್ಧಲೀಟರ್ ಸ್ಯಾಚೆಗಳಲ್ಲಿ ರಾಜ್ಯದ ಎಲ್ಲಾ ಡೈರಿಗಳ ಮೂಲಕ ವಿತರಣೆ ಮಾಡಲಾಗುತ್ತಿದೆ. ಹೆಚ್ಚಿನ ಹಾಲನ್ನು ಅರ್ಧ ಲೀಟರ್ ಸ್ಯಾಚೆಗಳಲ್ಲಿ ತುಂಬಿ ವಿತರಣೆಮಾಡಬೇಕಾಗಿದೆ. ಆದರೆ ಪ್ಯಾಕೆಜಿಂಗ್ ಯಂತ್ರಗಳ ಸಾಮರ್ಥ್ಯ, ಸಂಸ್ಕರಣ ಮತ್ತು ಶೈತ್ಯಾಗಾರ ಸಾಮರ್ಥ್ಯದ ಕಾರಣದಿಂದ ಹಾಲಿ ವಿತರಣೆಯಾಗುತ್ತಿರುವ ಹಾಲಿನ ಪ್ರಮಾಣವನ್ನು ಪೂರೈಸಲು ಕಷ್ಟಕರವಾಗುತ್ತದೆ. ರಾಜ್ಯದ ಗ್ರಾಹಕರ ಬೇಡಿಕೆಯನ್ನು ಗಣನೆಗೆ ತೆಗೆದುಕೊಂಡು ರಾಷ್ಟ್ರೀಯ ಹೈನು ಅಭಿವೃದ್ಧಿ ನಿಗಮದವರ ಕ್ಷೀರಧಾರೆ ಮೂರರ ಯೋಜನೆಯಲ್ಲಿ ರಾಜ್ಯದ ಬಹುತೇಕ ಡೈರಿಗಳ ಎನ್‌ಡಿಡಿಬಿ ಸಂಸ್ಕರಣ ಸಾಮರ್ಥ್ಯವನ್ನು ಹೆಚ್ಚಿಸುವ ಯೋಜನೆಯನ್ನು ರೂಪಿಸಿಕೊಂಡಿರುತ್ತೇವೆ. ಯೋಜನೆಯು ಪೂರ್ಣಗೊಂಡ ನಂತರ ಹೆಚ್ಚಿನ ಪ್ರಮಾಣದಲ್ಲಿ ಅರ್ಧ ಲೀಟರ್ ಸ್ಯಾಚೆಟ್ ಹಾಲಿನ ವಿತರಣೆಯನ್ನು ಮಾಡಲಾಗುತ್ತದೆ.

ಹಾಲನ್ನು ಮನೆಗಳಿಗೆ ಸರಬರಾಜು ಮಾಡುವ ನೆಪದಲ್ಲಿ ಹೆಚ್ಚಿನ ಆರ್ಥಿಕ ಲಾಭಕ್ಕೆ ಮಾರಾಟ ಮಾಡುವ ಬಗ್ಗೆ ಎಲ್ಲಾ ಅಧಿಕೃತ ಮಾರಾಟಗಾರರಿಗೆ ಕಡ್ಡಾಯವಾಗಿ ಗ್ರಾಹಕರಿಗೆ ಹಾಲನ್ನು ವಿತರಿಸುವ ಬಗ್ಗೆ ಸೂಚನೆ ಕೊಡಲಾಗಿದೆ. ಆದಾಗ್ಯೂ ಅಧಿಕೃತ ಮಾರಾಟಗಾರರರು ಹೋಟೆಲ್‌ಗೆ ಹಾಲನ್ನು ಸರಬಾರಾಜು ಮಾಡುವುದು ಕಂಡುಬಂದಲ್ಲಿ ಮೊದಲಿಗೆ ಅವರಿಂದ ದಂಡ ವಸೂಲಿ ಆದ ನಂತರ ಅವರ ಅಧಿಕೃತ ಮಾರಾಟದ ಏಜೆನ್ಸಿಯನ್ನು ರದ್ದು ಮಾಡುವ ಕ್ರಮವನ್ನು ಇಟ್ಟುಕೊಂಡಿರುತ್ತೇವೆ. ಈ ಬಗ್ಗೆ ಪುನಃ ಸೂಚನೆಯನ್ನು ಎಲ್ಲಾ ಅಧಿಕೃತ ಮಾರಾಟಗಾರರಿಗೆ ಕೊಡಲಾಗಿದೆ.

ಬೆಂಗಳೂರು ಡೈರಿಯ ಸಂಸ್ಕರಣ ಶೈತ್ಯಾಗಾರ ಸಾಮರ್ಥ್ಯವು ದಿನಂಪ್ರತಿ ಒಂದು ಲಕ್ಷ ಐವತ್ತು ಸಾವಿರ ಲೀಟರ್ ಇದ್ದಾಗ್ಯೂ ಕೂಡ ಪ್ರಸ್ತುತ ಮೂರು ಲಕ್ಷಕ್ಕೂ ಮೀರಿ ಹಾಲನ್ನು ಬೆಂಗಳೂರು ನಗರದ ಗ್ರಾಹಕರಿಗೆ ಸರಬರಾಜು ಮಾಡಲಾಗುತ್ತಿದೆ. ಇದರಲ್ಲಿ ಶೇಕಡಾ 30 ರಷ್ಟು ಅರ್ಧಲೀಟರ್ ಹಾಲಿನ ಪ್ಯಾಕೆಟ್‌ಗಳನ್ನು ದಿನನಿತ್ಯವೂ ಸರಬರಾಜು ಮಾಡುಲಾಗುತ್ತಿದೆ. ಹೆಚ್ಚಿನ ಬೇಡಿಕೆ ಬಂದಲ್ಲಿ ಉತ್ಪಾದನೆಯನ್ನು ಹೆಚ್ಚಿಸಿ ಸರಬರಾಜು ಮಾಡುವ ಯೋಜನೆಯನ್ನು ರೂಪಿಸುತ್ತಿದ್ದೇನೆ.

ಶ್ರೀ ಚೌಡರೆಡ್ಡಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ನನ್ನ ಪ್ರಶ್ನೆಗೆ ಸೋಮವಾರ ಉತ್ತರ ಹೇಳುತ್ತೇನೆಂದು ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಈಗ ಹೆಚ್. ಯು.ಡಿ. ಮಂತ್ರಿಗಳು ಬಂದಿರುವುದರಿಂದ ಆ ವಿಷಯವನ್ನು ಈಗಲೇ ತೆಗೆದುಕೊಳ್ಳಬಹುದು.

ಶ್ರೀ ಅಜೀಜ್ ಸೇಠ್ : ನಿಯಮ 334ರ ಮೇಲಿನ ಪ್ರಸ್ತಾಪ ಮುಗಿಯಲಿ ಆಮೇಲೆ ತೆಗೆದುಕೊಳ್ಳೋಣ.

ಚಿಕ್ಕಮಗಳೂರು ನಗರಕ್ಕೆ ಒಂದು ಸಂಚಾರಿ ಆರಕ್ಷಕ ಠಾಣೆಯನ್ನು ಮಂಜೂರು ಮಾಡುವುದು.

ಶ್ರೀ ಸಿ. ಆರ್. ಸಗೀರ್ ಅಹಮದ್(ಚಿಕ್ಕಮಗಳೂರು) : ಮಾನ್ಯ ಅಧ್ಯಕ್ಷರೇ ಚಿಕ್ಕಮಗಳೂರು ನಗರದಲ್ಲಿ ಜನಸಂಖ್ಯೆ ಬೆಳೆಯುತ್ತಿರುವುದು ಸರಿಯಷ್ಟೆ. ಇದರ ಜೊತೆಗೆ ವಾಹನಗಳ ಸಂಖ್ಯೆಯು ಸಹ ಬಹಳಷ್ಟು ಬೆಳೆದಿದೆ. ಇದಕ್ಕಾಗಿ ಚಿಕ್ಕಮಗಳೂರು ನಗರಸಭೆಯು ಹಾಗೂ ಜಿಲ್ಲಾ ಪೋಲೀಸ್ ಅಧಿಕಾರಿಗಳೂ ಸಹ ಸರ್ಕಾರಕ್ಕೆ ಒಂದು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಈ ಪ್ರಸ್ತಾವನೆಯ ಏನೆಂದರೆ, ನಗರದಲ್ಲಿ ಬೆಳೆಯುತ್ತಿರುವ